'ಬೆಳಿಗ್ಗೆ ನನ್ನ ಹಿಂದೆಯೇ ಬಸ್ಸಲ್ಲಿ ಹತ್ತಿ, ನಾನು ಇಳಿದ ಕಡೆನೇ ಇಳಿದ್ರಿ. ಈಗ ಸಂಜೇನೂ ನಾನು ಹತ್ತಿದ ಬಸ್ಸಿಗೆ ಹತ್ತಿ, ಇಲ್ಲೇ ಇಳಿದು ನೀವು ತಾನೆ ನನ್ನ ಹಿಂದೆ ಬರ್ತಾ ಇರೋದು?' ಎಂದು ತರಾಟೆಗೆ ತೆಗೆದುಕೊಳ್ಳುವಂತೆ ಕೇಳಿದಳು.



ಹಿಂದಿರುಗಲು ಬಸ್ ನಿಲ್ದಾಣಕ್ಕೆ ಬಂದರೆ ಆ ಹುಡುಗಿಯೂ ಆಗಲೇ ಬಂದು ಅಲ್ಲಿ ಬಸ್ಸಿಗೆ ಕಾಯುತ್ತಿದ್ದಳು. ಇವನನ್ನು ನೋಡಿದರೂ ಗಮನಿಸದಂತೆ ನಿಂತಿದ್ದಳು. ಅವಳು ಮುಂದಿನ ಬಾಗಿಲಿನಿಂದ ಬಸ್ ಹತ್ತಿದಾಗ ಇವನು ಹಿಂದಿನ ಬಾಗಿಲಿನಿಂದ ಏರಿದ್ದ. ಆದರೇನು? ಮತ್ತೆ ಇಬ್ಬರು ಇಳಿದದ್ದು ಅದೇ ಬೆಳಗ್ಗೆ ಹತ್ತಿದ ನಿಲ್ದಾಣದಲ್ಲೇ!

ಅವಳು ಹೊರಟ ಕಡೆಯೇ ಇವನ ಮನೆಯ ದಾರಿಯೂ ಇತ್ತು. ಹಾಗಾಗಿ ಬೇರೆ ಗತಿ ಇಲ್ಲದೆ ಅವಳ ಹಿಂದೆಯೇ ಹೊರಟ. ಅವಳು ಸ್ವಲ್ಪ ದೂರ ಹೋಗಿ ಹಾಗೆ ಅಲ್ಲೇ ನಿಂತು ಬಿಟ್ಟಳು. ಇವನು, 'ಒಳ್ಳೆಯದಾಯಿತು, ತಾನು ಬೇಗಬೇಗ ಹೊರಟು ಬಿಡೋಣ' ಎಂದು ವೇಗವನ್ನು ಹೆಚ್ಚಿಸಿದ. ಅವಳನ್ನು ತಟಾಯುತ್ತಿದ್ದಂತೆ. ಅವಳು 'ಒಂದು ನಿಮಿಷ' ಎಂದಳು; ಧ್ವನಿಯಲ್ಲಿ ದೃಢತೆ ಇತ್ತು.

ಇವನು ನಿಂತು ಅವಳತ್ತ 'ಏನು?' ಎನ್ನುವಂತೆ ನೋಡಿದ. ಅವನ ದೃಷ್ಟಿಯಲ್ಲಿ ಆತಂಕವಿತ್ತು.

ಅವಳು ತನ್ನ ಕತ್ತು ಕೊಂಕಿಸಿ ತನ್ನ ಜಡೆಯನ್ನು ಹಿಂದಿನಿಂದ ಮುಂದೆ ಮಾಡಿಕೊಂಡಳು. ಬಲಗೈಯಲ್ಲಿ ಅದನ್ನು ಹಿಡಿದು ಜಗ್ಗುತ್ತ, 'ನನ್ನನ್ನು ಯಾಕೆ ಹಿಂಬಾಲಿಸುತ್ತಾ ಇದ್ದೀರಿ?' ಎಂದು ಆಕ್ಷೇಪಿಸುವ ಧ್ವನಿಯಲ್ಲಿ ಕೇಳಿದಳು.

ಅವನು ಆಶ್ಚರ್ಯ ಆತಂಕದಿಂದ 'ಯಾರು? ನಾನಾ? ಇಲ್ಲ, ಇಲ್' ಎಂದ.

'ಬೆಳಿಗ್ಗೆ ನನ್ನ ಹಿಂದೆಯೇ ಬಸ್ಸಲ್ಲಿ ಹತ್ತಿ, ನಾನು ಇಳಿದ ಕಡೆನೇ ಇಳಿದ್ರಿ. ಈಗ ಸಂಜೇನೂ ನಾನು ಹತ್ತಿದ ಬಸ್ಸಿಗೆ ಹತ್ತಿ, ಇಲ್ಲೇ ಇಳಿದು ನೀವು ತಾನೆ ನನ್ನ ಹಿಂದೆ ಬರ್ತಾ ಇರೋದು?' ಎಂದು ತರಾಟೆಗೆ ತೆಗೆದುಕೊಳ್ಳುವಂತೆ ಕೇಳಿದಳು.

'ಇಲ್ಲಾರೀ! ನಾನು ಖಂಡಿತವಾಗಿ ನಿಮ್ಮನ್ನು ಹಿಂಬಾಲಿಸುತ್ತಿಲ್ಲ. ನೀವು ಯಾರು ಅಂತಾನೆ ನನಗೆ ಗೊತ್ತಿಲ್ಲ. ನಾನು ಯಾಕೆ ನಿಮ್ಮ ಹಿಂದೆ ಬರಲಿ? ನಮ್ಮನೆ ಇಲ್ಲೇ ಮೂರನೇ ಕ್ರಾಸಿನಲ್ಲಿ ಇರೋದು. ನನ್ನ ಆಫೀಸ್‌ಗೆ ನಾನು ಇಳಿದ ನಿಲ್ದಾಣದಿಂದ ಮುಂದೆ ಅರ್ಧ ಕಿಲೋಮೀಟರ್ ಅಷ್ಟೇ. ಇದು ಕೋಇನ್ಸಿಡೆನ್ಸ್ ಅಷ್ಟೇರಿ. ಪ್ಲೀಸ್, ತಪ್ಪು ತಿಳಿಬೇಡಿ.'

ಇವನ ಆತಂಕ ಹೆಚ್ಚಾಗುತ್ತಿತ್ತು. ಅವಳೇನಾದರು ಸ್ವಲ್ಪ ಗಲಾಟೆ ಮಾಡಿದರೆ, ಜನ ಸೇರೋದು ಗ್ಯಾರಂಟಿ ಇತ್ತು.

'ಪ್ರತಿದಿನ ನಿಮ್ಮ ಆಫೀಸ್‌ಗೆ ಈ ಬಸ್ಸಿನಲ್ಲೇ ಹೋಗ್ತೀರಾ?'

'ಇಲ್ಲ, ನಾನು ಸ್ಕೂಟರ್‌ನಲ್ಲಿ ಹೋಗ್ತೀನಿ. ನಿನ್ನೆ ಅದು ಕೆಟ್ಟು ಹೋಗಿತ್ತು. ಅದಕ್ಕೆ ಇವತ್ತು ಬಸ್ಸಿನಲ್ಲಿ ಬಂದೆ.' ಇವನು ವಿವರಣೆ ಕೊಟ್ಟ.

ಅವಳ ಪಾಟಿ ಸವಾಲು ಮುಂದುವರೆದಿತ್ತು. 'ಓ! ಆಫೀಸ್‌ಗೆ ಹೀಗೆ ಕೈಬೀಸಿಕೊಂಡು ಹೋಗ್ತೀರಾ? ಬ್ಯಾಗ್ ಇಲ್ಲ; ಊಟದ ಡಬ್ಬಿ ಇಲ್ಲ?!'

'ಇಲ್ಲಾರೀ, ಇವತ್ತು ಟ್ರೈನಿಂಗ್ ಪ್ರೋಗ್ರಾಮ್ ಇತ್ತು. ಊಟಾನು ಆಫೀಸಿನಲ್ಲೇ ಏರ್ಪಾಟು ಮಾಡಿದ್ರು. ನೋಡಿ ಟ್ರೈನಿಂಗಿನಲ್ಲಿ ಕೊಟ್ಟ ಎರಡು ಹೊಸ ಪೆನ್ನುಗಳು' ಎಂದು ಮುಂದಿನ ಜೇಬಿಗೆ ಸಿಕ್ಕಿಸಿಕೊಂಡಿದ್ದ ಪೆನ್ನುಗಳನ್ನು ತೆಗೆದು ತೋರಿಸಿದ.

ಅವಳ ಮುಖದಲ್ಲಿ ನಗೆ ಮಿಂಚಿ ಮಾಯವಾಯಿತು. 'ಇದನ್ನು ನಾನು ನಂಬಬೇಕಾ?' ಮತ್ತೆ ಕೇಳಿದಳು.

'ಅಯ್ಯೋ! ಹೌದೂರಿ' ಎಂದು ತನ್ನ ಪ್ಯಾಂಟ್ ಜೇಬಿಗೆ ಕೈ ಹಾಕಿ ಒಂದು ಸಣ್ಣ ಪ್ಲಾಸ್ಟಿಕ್ ಕವರ್ ಹೊರಗೆಳೆದು, 'ನೋಡಿ ಊಟದ ಜೊತೆ ಕೊಟ್ಟಿದ್ದ ಬೀಡಾ. ನಾನು ಬೀಡಾ ಹಾಕಿಕೊಳ್ಳೋದಿಲ್ಲ. ಆದರೆ ನಮ್ಮ ಅಮ್ಮನಿಗೆ ಇಷ್ಟ ಅಂತ ಜೇಬಲ್ಲಿ ಇಟ್ಟುಕೊಂಡಿದ್ದೀನಿ.' ಅವಳಿಗೆ ನಂಬಿಕೆ ಬರಿಸಲು ತನ್ನ ಬುದ್ಧಿಯನ್ನೆಲ್ಲ ಖರ್ಚು ಮಾಡುತ್ತಿದ್ದ.

ಅವಳಿಗೆ ನಗು ತಡೆಯಲು ಆಗದೆ, ಅತ್ತ ತಿರುಗಿ ನಕ್ಕುಬಿಟ್ಟಳು. ಅನಂತರ ಸಾವರಿಸಿಕೊಂಡು, ಇವನ ಕಡೆ ತಿರುಗಿ, ಗತ್ತಿನಿಂದ 'ನಿಮ್ಮ ಹೆಸರು ತಾನೇ?' ಎಂದು ಕೇಳಿದಳು.

ತನ್ನ ಹೆಸರನ್ನು ಅವಳ ಬಾಯಲ್ಲಿ ಕೇಳಿ ಇವನ ಬಾಯಿ ಒಣಗಿತು. ಸುಮ್ಮನೆ ತಲೆ ಆಡಿಸಿದ. 'ನಿಮ್ಮ ತಂದೆ ಅವರು ತಾನೇ?' ಎಂದು ಮತ್ತೆ ಪ್ರಶ್ನೆ ಮಾಡಿದಳು.

ಇವನಿಗೆ ಸಾಕುಬೇಕಾಯಿತು. 'ಅಲ್ಲಾರಿ, ಯಾರ್ರೀ ನೀವು? ಒಳ್ಳೆ ಸಿಐಡಿ ಇನ್ಸ್‌ಪೆಕ್ಟರ್ ತರಹ ಪ್ರಶ್ನೆ ಮಾಡುತ್ತಿದ್ದೀರಿ?' ಎಂದು ಕೇಳಿದ.

'ಯಾಕೆಂದರೆ ನೀವು ನನ್ನ ಹಿಂಬಾಲಿಸುತ್ತಾ ಇದ್ದೀರೋ ಇಲ್ಲವೋ ತಿಳಿದುಕೊಳ್ಳಬೇಕಾಗಿತ್ತು. ಅದಕ್ಕೆ!' ಎಂದು ತನ್ನ ಜಡೆಯನ್ನು ಹಿಂದಕ್ಕೆ ಬೀಸಿ ಎಸೆದು, ಇವನ ಕಡೆ ಸಣ್ಣ ನಗೆ ಬೀರಿ, ಆ ಕಡೆ ತಿರುಗಿ, ಮುಂದಕ್ಕೆ ದೃಢವಾಗಿ ಹೆಜ್ಜೆ ಹಾಕಿದಳು.

ಅವಳು ಗಲಾಟೆ ಮಾಡದೆ ಅತ್ತ ಹೊರಟದ್ದರಿಂದ ಇವನಿಗೆ ಸ್ವಲ್ಪ ಸಮಾಧಾನವಾಗಿತ್ತು. ಆದರೂ, 'ಅಲ್ಲ ಇವಳ ಪ್ರಶ್ನೆಗೆ ತಾನೇಕೆ ಹೆದರಿ ಹೀಗೆಲ್ಲ ಉತ್ತರ ಕೊಟ್ಟೆ? ನನ್ನ ಹೆಸರು, ಅಪ್ಪನ ಹೆಸರು ಅವಳಿಗೆ ಹೇಗೆ ಗೊತ್ತು?' ಎಂದು ಯೋಚಿಸುತ್ತ, 'ಇನ್ನು ಮೇಲೆ ಯಾವತ್ತೂ ಬಸ್ಸಿನಲ್ಲಿ ಹೋಗಬಾರದು' ಎಂದು ತೀರ್ಮಾನಿಸಿ, ಮನೆಯ ಕಡೆ ಹೆಜ್ಜೆ ಹಾಕಿದ.

'ಯಾಕೋ ಲೇಟು?' ಎಂದು ಅಮ್ಮ ಕೇಳಿದಾಗ, 'ಅಮ್ಮ, ಬಸ್ ಇಳಿದು ಬರಬೇಕಾದ್ರೆ' ಎಂದು ಆಗಿದ್ದ ವಿಚಾರ ತಿಳಿಸಲು ಹೊರಟ. ತಕ್ಷಣವೇ ನಾಲಿಗೆ ಕಚ್ಚಿಕೊಂಡು, ನಡೆದದ್ದು ಹೇಳಿದರೆ ಇಲ್ಲೂ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗುತ್ತೆ ಎನ್ನಿಸಿ ಅಲ್ಲಿಗೆ ನಿಲ್ಲಿಸಿದ.

ಅಮ್ಮ '... ಬರಬೇಕಾದ್ರೆ?' ಎಂದು ಅವನ ಕಡೆ ನೋಡಿದರು. ತಕ್ಷಣವೇ ಜೇಬಿನಿಂದ ಬೀಡ ತೆಗೆದು ಅಮ್ಮನ ಕೈಗೆ ಕೊಟ್ಟ. ಅವರ ಮುಖವು ಅರಳಿತು.

'ಏನಿಲ್ಲಮ್ಮ, ನನ್ನ ಹಳೆ ಸ್ಕೂಲ್ ಫ್ರೆಂಡ್ ಸಿಕ್ಕಿದ್ದ. ಮಾತಾಡ್ತಾ ನಿಂತುಕೊಂಡಿದ್ದೆ. ಅಷ್ಟೇ' ಎಂದು ಜಾಗ ಖಾಲಿ ಮಾಡಿದ.

ಭಾನುವಾರ ಸಂಜೆ ಇಸ್ತ್ರಿ ಮಾಡಿದ ಬಟ್ಟೆ ಹಾಕಿಕೊಂಡು, ಕ್ರಾಪ್ ತೀಡಿಕೊಂಡು ತಯಾರಾಗಿ ಅಪ್ಪ ಅಮ್ಮನ ಜೊತೆ ಮಾತನಾಡುತ್ತ ಕುಳಿತಿದ್ದ. ಅಪ್ಪನ ಸ್ನೇಹಿತರು 'ರಾಹುಕಾಲ ಮುಗಿತು. ಹೋಗೋಣ್ವಾ?' ಅಂತ ಒಳಗೆ ಬಂದರು. 'ಇಲ್ಲೇ ನಾಲ್ಕು ಕ್ರಾಸ್ ಮುಂದೆ ಅಷ್ಟೇ. ನಡೆದುಕೊಂಡು ಹೋಗೋಣ ಅಲ್ಲವಾ?' ಎಂದರು. ಅಪ್ಪ 'ಸರಿ' ಎಂದು ಮನೆಗೆ ಬೀಗ ಹಾಕಿದರು.